## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ. PW-1

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿಃ 15.01.2025

ಮುಂದುವರೆದ ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿ ಪರ ವಕೀಲರಿಂದಃ

ದಾವಾ ಸ್ವತ್ತು ನನ್ನ ತಂದೆಯ ತಾತನ ಆಸ್ತಿ ಇರುತ್ತದೆ. ನನ್ನ ತಂದೆಗೆ ಇಬ್ಬರು ಹೆಂಡತಿಯರು ಇದ್ದರು, ಅವರುಗಳೆಂದರೆ ದೇವಮ್ಮ ಮತ್ತು ನಿಂಗಮ್ಮ ಇರುತ್ತಾರೆ. ನಾನು 2 ನೇ ಹೆಂಡತಿಯ ಮಗ ಇರುತ್ತೇನೆ. 2 ನೇ ಹೆಂಡತಿಗೆ 4 ಜನ ಮಕ್ಕಳುಗಳು ಇದ್ದು ಅವರುಗಳೆಂದರೆ, ಲಕ್ಷ್ಮಿ, ಚೆಲುವರಾಜು, ಲಕ್ಷಿ ಉರುಫ್ ಪದ್ಮ ಮತ್ತು ನಾನು ಇರುತ್ತೇವೆ.

ದಾವಾ ಸ್ವತ್ತು ನಿಮಗೆ ಹೇಗೆ ಬಂದಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ದಾವಾ ಸ್ವತ್ತು ಪಿತ್ರಾರ್ಜಿತವಾದ ಆಸ್ತಿಯಾಗಿದ್ದು ನನ್ನ ತಂದೆಯಿಂದ ಬಂದಿರುತ್ತದೆ ಎಂದು ನುಡಿಯುತ್ತಾರೆ. ದಿನಾಂಕ 25.04.2013 ರಂದು ನಿಮ್ಮ ತಂದೆಯವರು ವಿಲ್ ಮಾಡಿದ್ದರೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ವಿಲ್ ಗೆ ಸಂಬಂಧಿದಂತೆ ನೀವು ನ್ಯಾಯಾಲಯದಿಂದ ಪ್ರಬೋಟ್ ಸರ್ಟಿಫಿಕೇಟನ್ನು ತೆಗೆದುಕೊಂಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ರಾಜಾ ಎನ್ನುವವರು ಮನೆ ಕಟ್ಟಿಕೊಂಡು ವಾಸವಾಗಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅದು ನಮ್ಮ ಮನೆ ಎಂದು ನುಡಿಯುತ್ತಾರೆ. ಸದರಿ ಮನೆಯಲ್ಲಿ ಯಾರು ವಾಸವಾಗಿದ್ದಾರೆ ಎಂದು ತಿಳಿದುಕೊಳ್ಳಲು ನ್ಯಾಯಾಲಯದಿಂದ ನಿಯೋಗಿಯನ್ನು ನೇಮಕ ಮಾಡಲು ನನ್ನದು ತಕರಾರು ಇರುವುದಿಲ್ಲ.

ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಸುಮಾರು ಇಪ್ಪತ್ತು ವರ್ಷಗಳ ಕಾಲ ಅದು ಯಾರ ಹೆಸರಿನಲ್ಲೂ ಖಾತೆ ಇರಲಿಲ್ಲ ಎಂದರೆ ಸರಿ. 20 ವರ್ಷ ಆದ ನಂತರ ನಿಮ್ಮ ಹೆಸರಿಗೆ ನೇರವಾಗಿ ಖಾತೆ ಬದಲಾವಣೆ ಮಾಡಿಸಿರುತ್ತೀರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

1960 ನೇ ಇಸವಿಯಲ್ಲಿ ನನ್ನ ತಾತನಾದ ಕೆಂಪಸಿಂಗೇಗೌಡ ಮತ್ತು ನನ್ನ ತಂದೆ ದಾಸೇಗೌಡ ಇಬ್ಬರು ಸೇರಿ ದಾವಾ ಸ್ವತ್ತಿನಲ್ಲಿ 3 ಮುಕ್ಕಾಲು ಗುಂಟೆ ಜಮೀನನ್ನು ನೊಂದಾಯಿತವಲ್ಲದ ಕ್ರಯಪತ್ರದ ಮುಖಾಂತರ ಚೂರಿನಿಂಗೇಗೌಡರಿಗೆ ಮಾರಾಟ ಮಾಡಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ನೀವು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಸಾ.ಓ.ಹೇ.ಸ.ಓ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ., ಶ್ರೀರಂಗಪಟ್ಟಣ.**